# ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ

ಮುಕ್ತಗಂಗೋತ್ರಿ, ಮೈಸೂರು – ೫೭೦ ೦೦೬

'ವಿಶ್ವವಿದ್ಯಾನಿಲಯದ 25ನೇ ವರ್ಷದ ಬೆಳ್ಳಿ ಹಬ್ಬದ ವರ್ಷಾಚರಣೆ' ಜೂನ್ – 2021 ರಿಂದ ಜೂನ್ – 2022 ರವರೆಗೆ

**ದಿನಾಂಕ: 15–11–2021** ರಂದು ಅಪರಾಹ್ನ **03:30** ಗಂಟೆಗೆ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಮಾನ್ಯ ಕುಲಪತಿಗಳ ಕಚೇರಿ ಸಭಾಂಗಣದಲ್ಲಿ ಮಾನ್ಯ ಕುಲಪತಿಗಳ ಅಧ್ಯಕ್ಷತೆಯಲ್ಲಿ ನಡೆದ **58ನೇ ಶೈಕ್ಷಣಿಕ ಮಂಡಳಿ ಸಾಮಾನ್ಯ ಸಭೆಯ** ನಡಾವಳಿ.

| ಉಪಸ್ಥಿತರು | |
|---|---|
| **ಪ್ರೊ. ಎಸ್. ವಿದ್ಯಾಶಂಕರ್**<br>ಮಾನ್ಯ ಕುಲಪತಿಗಳು ಹಾಗು ಅಧ್ಯಕ್ಷರು<br>ಶೈಕ್ಷಣಿಕ ಮಂಡಳಿ,<br>ಕರಾಮುವಿ, ಮೈಸೂರು. | **ಪ್ರೊ. ರಾಜಣ್ಣ .ಆರ್**<br>ಕುಲಸಚಿವ ಮತ್ತು ಸದಸ್ಯ ಕಾರ್ಯದರ್ಶಿಗಳು<br>ಶೈಕ್ಷಣಿಕ ಮಂಡಳಿ,<br>ಕರಾಮುವಿ, ಮೈಸೂರು ಹಾಗು<br>**ಕುಲಸಚಿವ (ಪರೀಕ್ಷಾಂಗ)**<br>ಸದಸ್ಯರು ಶೈಕ್ಷಣಿಕ ಮಂಡಳಿ,<br>ಕರಾಮುವಿ, ಮೈಸೂರು. |
| **ಡಾ. ಕಾಂಬ್ಳೆ ಅಶೋಕ್**<br>ಡೀನ್ (ಶೈಕ್ಷಣಿಕ) ಹಾಗು<br>ಸದಸ್ಯರು<br>ಶೈಕ್ಷಣಿಕ ಮಂಡಳಿ,<br>ಕರಾಮುವಿ, ಮೈಸೂರು. | **ಡಾ. ಎ. ಖಾದರ್ ಪಾಷಾ**<br>ಹಣಕಾಸು ಅಧಿಕಾರಿಗಳು ಹಾಗು ಸದಸ್ಯರು<br>ಶೈಕ್ಷಣಿಕ ಮಂಡಳಿ,<br>ಕರಾಮುವಿ, ಮೈಸೂರು. |
| **ಡಾ. ಲಕ್ಷ್ಮಿ .ಎನ್**<br>ಅಧ್ಯಕ್ಷರು, ಶಿಕ್ಷಣಶಾಸ್ತ್ರ ಅಧ್ಯಯನ ಹಾಗು ಸಂಶೋಧನಾ ವಿಭಾಗ<br>ಸದಸ್ಯರು ಶೈಕ್ಷಣಿಕ ಮಂಡಳಿ, ಕರಾಮುವಿ, ಮೈಸೂರು. | **ಡಾ. ಷಣ್ಮುಖ**<br>ಡೀನ್ (ಅಧ್ಯಯನ ಕೇಂದ್ರಗಳು),<br>ಸದಸ್ಯರು ಶೈಕ್ಷಣಿಕ ಮಂಡಳಿ,<br>ಕರಾಮುವಿ, ಮೈಸೂರು. |
| **ವಿಶೇಷ ಆಹ್ವಾನಿತರು** | |
| **ಡಾ. ನಿರಂಜನ್ ರಾಜ್**<br>CIQA **ನಿರ್ದೇಶಕರು**<br>ಕರಾಮುವಿ, ಮೈಸೂರು. | **ಡಾ. ಹೆಚ್. ರಾಜೇಶ್ವರಿ**<br>**ವಿಶೇಷಾಧಿಕಾರಿ – ಡೀನ್ (ಶೈಕ್ಷಣಿಕ)**<br>ಕರಾಮುವಿ, ಮೈಸೂರು. |

ಸಭೆಗೆ ಹಾಜರಾಗಿದ್ದ ಅಧ್ಯಕ್ಷರು ಹಾಗು ಸದಸ್ಯರುಗಳನ್ನು ಮಾನ್ಯ ಡೀನ್ (ಶೈಕ್ಷಣಿಕ) ಸ್ವಾಗತಿಸುವುದರೊಂದಿಗೆ ಸಭೆಯು ಪ್ರಾರಂಭವಾಯಿತು. ಮುಂದುವರೆದು ಮಾನ್ಯ ಕುಲಪತಿಗಳು ಮಾತನಾಡುತ್ತಾ, 58ನೇ ಶೈಕ್ಷಣಿಕ ಮಂಡಳಿ ಸಾಮಾನ್ಯ ಸಭೆಯ ಕಾರ್ಯಸೂಚಿಯನ್ನು ಸಭೆಯಲ್ಲಿ ಮಂಡಿಸಲು ಡೀನ್ (ಶೈಕ್ಷಣಿಕ) ವಿಭಾಗದ ವಿಶೇಷಾಧಿಕಾರಿ ಅವರಿಗೆ ಸೂಚಿಸಿದರು.

**ಕುಲಸಚಿವರು.** **ಕುಲಪತಿಗಳು**

**ವಿಷಯ ಸಂಖ್ಯೆ: 58.01**

**ವಿಷಯ:** 17, 18 ಹಾಗು 19ನೇ ವಿಶೇಷ ಶೈಕ್ಷಣಿಕ ಮಂಡಳಿ ಸಭೆಯ ನಡಾವಳಿಗಳನ್ನು ಅನುಮೋದಿಸುವ ಬಗ್ಗೆ.

* * * *

ವಿಶ್ವವಿದ್ಯಾನಿಲಯದ Statute I Section B.11rder of Business ಪ್ರಕಾರ ದಿನಾಂಕ : 25–06–2021 ರಂದು ನಡೆದ 17ನೇ ವಿಶೇಷ ಶೈಕ್ಷಣಿಕ ಮಂಡಳಿ ಸಭೆಯ ನಡಾವಳಿ, ದಿನಾಂಕ : 12–08–2021 ರಂದು ನಡೆದ 18ನೇ ವಿಶೇಷ ಶೈಕ್ಷಣಿಕ ಮಂಡಳಿ ಸಭೆಯ ನಡಾವಳಿ ಹಾಗು ದಿನಾಂಕ : 14–09–2021 ರಂದು ನಡೆದ 19ನೇ ವಿಶೇಷ ಶೈಕ್ಷಣಿಕ ಮಂಡಳಿ ಸಭೆಯ ನಡಾವಳಿಯನ್ನು ಸದಸ್ಯರ ಮುಂದೆ ಅನುಮೋದನೆಗಾಗಿ ಹಾಜರುಪಡಿಸಲಾಯಿತು.

**ತೀರ್ಮಾನ :**

**ಶೈಕ್ಷಣಿಕ ಮಂಡಳಿ ಸಭೆಯಲ್ಲಿ 17, 18 ಹಾಗು 19ನೇ** ವಿಶೇಷ ಶೈಕ್ಷಣಿಕ ಮಂಡಳಿ ಸಭೆಯ **ನಡಾವಳಿಗಳನ್ನು ಅನುಮೋದಿಸಲಾಯಿತು.**

**ಕುಲಸಚಿವರು** **ಕುಲಪತಿಗಳು**

**ವಿಷಯ ಸಂಖ್ಯೆ: 58.02**

**ವಿಷಯ:** 2021–22ನೇ ಶೈಕ್ಷಣಿಕ ಸಾಲಿನಲ್ಲಿ ಎಂಬಿಎ ಕಾರ್ಯಕ್ರಮದ ಅಭ್ಯರ್ಥಿಗಳಿಗೆ ಸಾಮಾನ್ಯ ಪ್ರವೇಶ ಪರೀಕ್ಷೆಯಿಂದ ವಿನಾಯಿತಿ ನೀಡಿರುವುದರ ಕುರಿತು ಘಟನೋತ್ತರ ಮಂಜೂರಾತಿ ಪಡೆಯುವುದರ ಬಗ್ಗೆ.

* * * *

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ಪ್ರಸ್ತುತ ದೇಶದಾದ್ಯಂತ ಕೋವಿಡ್–19 ಸಮಸ್ಯೆ ಇರುವ ಕಾರಣ 2021–22ನೇ ಶೈಕ್ಷಣಿಕ ಸಾಲಿನಲ್ಲಿ ಅನೇಕ ವಿಶ್ವವಿದ್ಯಾನಿಲಯಗಳು ಹಾಗೂ ರಾಜ್ಯಗಳು ಎಂಬಿಎ ಕಾರ್ಯಕ್ರಮಕ್ಕೆ ಸಾಮಾನ್ಯ ಪ್ರವೇಶ ಪರೀಕ್ಷೆಯಿಂದ ವಿನಾಯಿತಿ ನೀಡಿವೆ. ಈ ರದ್ಧತಿಯನ್ನು AICTEಯು ತನ್ನ ಅಧೀನ ಕಾಲೇಜುಗಳು ಹಾಗೂ ವಿಶ್ವವಿದ್ಯಾನಿಲಯಗಳಿಗೆ ನೀಡಿರುವ ಪ್ರಸ್ತಾವನೆ ಆಧರಿಸಿ ಮಾಡಲಾಗಿದೆ. ಪ್ರಸಕ್ತ ಶೈಕ್ಷಣಿಕ ಸಾಲಿನಲ್ಲಿ ಕರಾಮುವಿಯಲ್ಲಿ ದಿನಾಂಕ: 01–10–2021ರ ಮಾನ್ಯ ಕುಲಪತಿಗಳ ಅನುಮೋದನೆ ಮೇರೆಗೆ ಎಂಬಿಎ ಕಾರ್ಯಕ್ರಮಕ್ಕೆ ಅಭ್ಯರ್ಥಿಗಳಿಗೆ ಪ್ರವೇಶಾತಿ ಪರೀಕ್ಷೆಯಿಂದ ವಿನಾಯಿತಿ ನೀಡಿ ನೇರ ಪ್ರವೇಶಾತಿಗೆ ಅವಕಾಶ ಕಲ್ಪಿಸಿದೆ.

ಸದರಿ ವಿಷಯವನ್ನು ಘಟನೋತ್ತರ ಮಂಜೂರಾತಿಗಾಗಿ ಶೈಕ್ಷಣಿಕ ಸಭೆ ಹಾಗೂ ವ್ಯವಸ್ಥಾಪನಾ ಮಂಡಳಿಯ ಅವಗಾಹನೆ ಮತ್ತು ಅನುಮೋದನೆಗಾಗಿ ಮಂಡಿಸಿದೆ.

ತೀರ್ಮಾನ :

**ಶೈಕ್ಷಣಿಕ ಮಂಡಳಿ ಸಭೆಯಲ್ಲಿ 2021–22ನೇ ಶೈಕ್ಷಣಿಕ ಸಾಲಿನ ಮೊದಲನೇ ಆವರ್ತನದಲ್ಲಿ ಎಂಬಿಎ ಕಾರ್ಯಕ್ರಮಕ್ಕೆ ಅಭ್ಯರ್ಥಿಗಳಿಗೆ ಸಾಮಾನ್ಯ ಪ್ರವೇಶ ಪರೀಕ್ಷೆಯಿಂದ ವಿನಾಯಿತಿ ನೀಡಿರುವುದರ ಕುರಿತು ಘಟನೋತ್ತರ ಮಂಜೂರಾತಿ ನೀಡಲಾಯಿತು ಹಾಗು ಎರಡನೇ ಆವರ್ತನದಲ್ಲಿ ಸಾಮಾನ್ಯ ಪ್ರವೇಶ ಪರೀಕ್ಷೆಯಿಂದ ವಿನಾಯಿತಿ ನೀಡಲು ಅನುಮೋದನೆ ನೀಡಲಾಯಿತು.**

ಕುಲಸಚಿವರು

ಕುಲಪತಿಗಳು

**ವಿಷಯ ಸಂಖ್ಯೆ: 58.03**

**ವಿಷಯ** : BBA in Marketing ಕಾರ್ಯಕ್ರಮಕ್ಕೆ CBCS ಮಾದರಿಯಲ್ಲಿ Syllabusನ್ನು ಅನುಮೋದಿಸುವ ಬಗ್ಗೆ.

* * * *

BOS (UG) ಯಲ್ಲಿ BBA ಕಾರ್ಯಕ್ರಮಕ್ಕೆ CBCS ಮಾದರಿಯಲ್ಲಿ Syllabusನ್ನು ಸಿದ್ದಪಡಿಸಿ ಅನುಮೋದನೆ ಪಡೆಯಲಾಗಿತ್ತು. ಆದರೆ ಪ್ರಸ್ತುತ UGCಯವರು BBA in Marketing ಕಾರ್ಯಕ್ರಮಕ್ಕೆ ಅನುಮೋದನೆ ನೀಡಿರುವುದನ್ನು ಗಮನಿಸಿ ನಿರ್ವಹಣಾಶಾಸ್ತ್ರ ವಿಭಾಗದವರು BBA in Marketing ಕಾರ್ಯಕ್ರಮಕ್ಕೆ CBCS ಮಾದರಿಯಲ್ಲಿ syllabusನ್ನು ಸಿದ್ಧಪಡಿಸಿ ನೀಡಿರುತ್ತಾರೆ. ಈ ಸಂಬಂಧ ಶೈಕ್ಷಣಿಕ ಮಂಡಳಿ ಸಭೆಯ ಚರ್ಚೆ ಮತ್ತು ನಿರ್ಣಯಕ್ಕಾಗಿ ಮಂಡಿಸಿದೆ.

<u>ತೀರ್ಮಾನ</u> :

**BBA in Marketing ಕಾರ್ಯಕ್ರಮಕ್ಕೆ CBCS ಮಾದರಿಯ Syllabusನ್ನು ಅನುಮೋದಿಸಲಾಯಿತು.**

ಕುಲಸಚಿವರು

ಕುಲಪತಿಗಳು

## ವಿಷಯ ಸಂಖ್ಯೆ: 58.04

ವಿಷಯ : U-Tech Educational Services Pvt Ltd., ಇವರ ಸಹಕಾರದೊಂದಿಗೆ 05 UG Certificate ಕಾರ್ಯಕ್ರಮಗಳನ್ನು ಕರಾಮುವಿಯಲ್ಲಿ ಆರಂಭಿಸುವ ಬಗ್ಗೆ.

* * * *

U-Tech Educational Services Pvt Ltd., ಇವರ ಸಹಕಾರದೊಂದಿಗೆ ಈ ಕೆಳಕಂಡ ಕಾರ್ಯಕ್ರಮಗಳನ್ನು ಆರಂಭಿಸಲು ನಿರ್ವಹಣಾಶಾಸ್ತ್ರ ವಿಭಾಗದವರು ಪ್ರಸ್ತಾವನೆ ನೀಡಿರುತ್ತಾರೆ.

1. UG Certificate Program in Digital Marketing.
2. UG Certificate Program in Travel & Tourism
3. UG Certificate Program in Digital Finanace & Banking
4. UG Certificate Program in Entraprenurship.
5. UG Certificate Program in Social Media Management.

ಮೇಲಿನ 05 UG Certificate Programme ಗಳನ್ನು ನಿರ್ವಹಣಾಶಾಸ್ತ್ರ ವಿಭಾಗದವರು ಕರಾಮುವಿಯಲ್ಲಿ ಆರಂಭಿಸಲು BOS ನಲ್ಲಿ ತೀರ್ಮಾನಿಸಿರುತ್ತಾರೆ. ಆದ್ದರಿಂದ ಸದರಿ UG Certificate Programme ಗಳನ್ನು ಆರಂಭಿಸುವ ಸಂಬಂಧ ಶೈಕ್ಷಣಿಕ ಮಂಡಳಿ ಸಭೆಯ ಚರ್ಚೆ ಮತ್ತು ನಿರ್ಣಯಕ್ಕಾಗಿ ಮಂಡಿಸಿದೆ.

ತೀರ್ಮಾನ :

**ಮೇಲ್ಕಂಡ 05 UG Certificate ಕಾರ್ಯಕ್ರಮಗಳನ್ನು ನಿರ್ವಹಣಾಶಾಸ್ತ್ರ ವಿಭಾಗದಿಂದ ಆರಂಭಿಸಲು ಅನುಮೋದನೆ ನೀಡಲಾಗಿದೆ. ಸದರಿ ಕಾರ್ಯಕ್ರಮಗಳ ಪಠ್ಯಕ್ರಮಗಳನ್ನು ಸಿದ್ಧಪಡಿಸಿ ಮುಂದಿನ ಶೈಕ್ಷಣಿಕ ಮಂಡಳಿಯಲ್ಲಿ ವಿಷಯ ಮಂಡಿಸಲು ನಿರ್ವಹಣಾಶಾಸ್ತ್ರ ವಿಭಾಗಕ್ಕೆ ತಿಳಿಸಲು ತೀರ್ಮಾನಿಸಲಾಯಿತು. U-Tech Educational Services Pvt Ltd., ಇವರಿಗೆ ELSC ಎಂದು ಪರಿಗಣಿಸಲು ಕ್ರಮಕೈಗೊಳ್ಳಲು ಡೀನ್ (ಅಧ್ಯಯನ ಕೇಂದ್ರಗಳು) ಅವರಿಗೆ ತಿಳಿಸಲಾಯಿತು.**

ಕುಲಸಚಿವರು.

ಕುಲಪತಿಗಳು

## ವಿಷಯ ಸಂಖ್ಯೆ: 58.05

**ವಿಷಯ** : ವಿವಿಯ BBA in Marketing ಕಾರ್ಯಕ್ರಮಕ್ಕೆ Team Lease, EDTECH, Making India Employable, ಅಥವಾ Board of Apprenticeship Training, (BOAT) Karnataka., ಈ ಸಂಸ್ಥೆಗಳ ಸಹಕಾರದೊಂದಿಗೆ Apprenticeship Embedded ಕಾರ್ಯಕ್ರಮವನ್ನು ಆರಂಭಿಸುವ ಬಗ್ಗೆ.

* * * *

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದಲ್ಲಿ BBA in Marketing ಶಿಕ್ಷಣಕ್ರಮವನ್ನು ಪ್ರಾರಂಭಿಸಲು UGC ಮಾನ್ಯತೆ ದೊರೆತಿದ್ದು, ಸದರಿ ಶಿಕ್ಷಣಕ್ರಮವನ್ನು Apprenticeship Embedded BBA in Marketing ಕಾರ್ಯಕ್ರಮ ಎಂದು ಆರಂಭಿಸಲು ನಿರ್ವಾಹಣಾಶಾಸ್ತ್ರ ವಿಭಾಗವು ಉದ್ದೇಶಿಸಿದೆ.

ಸದರಿ ಶಿಕ್ಷಣಕಾರ್ಯಕ್ರಮದ ವಿದ್ಯಾರ್ಥಿಗಳಿಗೆ Apprenticeship ದೊರೆಕಿಸಿ ಕೊಡಲು Team Lease EDTECH, Making India Employable ಇವರು ಪ್ರಸ್ತಾವನೆ ನೀಡಿರುತ್ತಾರೆ (ಪ್ರತಿ ಲಗತ್ತಿಸಿದೆ) ಮತ್ತು BBA ಕಾರ್ಯಕ್ರಮದ ಸಂಯೋಜಕರು Board of Apprenticeship Training (BOAT), Karnataka, ಇವರಿಗೆ ಪ್ರಸ್ತಾವನೆ ಕೋರಿರುತ್ತಾರೆ.

ಕರ್ನಾಟಕ ಸರ್ಕಾರದ Board of Apprenticship Training (BOAT) ಇವರು ಸಹ Apprenticeship Embedded ಕಾರ್ಯಕ್ರಮವನ್ನು ನಡೆಸಲು ಸರ್ಕಾರದ ಅಧಿಕೃತ ಸಂಸ್ಥೆಯಾಗಿದ್ದು, ಇವರು ವಿದ್ಯಾರ್ಥಿಗಳಿಗೆ Apprenticeship ದೊರೆಕಿಸಿಕೊಡಲು ಸಂಬಂಧಪಟ್ಟ ಕಂಪನಿಗಳಲ್ಲಿ Training ವ್ಯವಸ್ಥೆ ಮಾಡಿ ನಂತರ ಕ್ರಮವಹಿಸುವುದಾಗಿ ಮೌಖಿಕವಾಗಿ ತಿಳಿಸಿರುತ್ತಾರೆ. ಈ ಎರಡು ಸಂಸ್ಥೆಗಳಲ್ಲಿ ಯಾವ ಸಂಸ್ಥೆಯ ಸಹಕಾರದೊಂದಿಗೆ Apprenticeship Embedded & BBA in Marketing ಶಿಕ್ಷಣಕ್ರಮವನ್ನು ವಿವಿಯ ವಿದ್ಯಾರ್ಥಿಗಳ ಉದ್ಯೋಗಾವಕಾಶದ ಹಿತದೃಷ್ಟಿಯಿಂದ ನೆಡೆಸಬೇಕೆಂಬುದರ ಬಗ್ಗೆ ಸದರಿ ವಿಷಯವನ್ನು ಶೈಕ್ಷಣಿಕ ಮಂಡಳಿಯ ಚರ್ಚೆ ಮತ್ತು ನಿರ್ಣಯಕ್ಕೆ ಮಂಡಿಸಿದೆ.

<u>ಚರ್ಚೆ</u> :

**ಕರ್ನಾಟಕ ಸರ್ಕಾರದ Board of Apprenticship Training (BOAT) ಇವರ ಜೊತೆ BBA ಕಾರ್ಯಕ್ರಮದ ಸಂಯೋಜಕರು ಚರ್ಚೆ ನಡೆಸಿದ್ದನ್ನು ಸಭೆಯ ಗಮನಕ್ಕೆ ತರಲಾಯಿತು. BOAT ಇವರು ವಿದ್ಯಾರ್ಥಿಗಳಿಗೆ Apprenticeship ದೊರೆಕಿಸಿಕೊಡಲು ಸಂಬಂಧಪಟ್ಟ ಸಂಸ್ಥೆಗಳಲ್ಲಿ BTP ಕಾರ್ಯಕ್ರಮವನ್ನು ಆರಂಭಿಸಬೇಕಿದ್ದು ಇದಕ್ಕೆ ಹೆಚ್ಚಿನ ಕಾಲಾವಕಾಶ ಬೇಕಾಗುತ್ತದೆ ಎಂದು BOAT ನ ಜಂಟಿ ನಿರ್ದೇಶಕರು ತಿಳಿಸಿರುತ್ತಾರೆ ಎಂಬ ವಿಷಯವನ್ನು ಸಭೆಗೆ ತಿಳಿಸಲಾಯಿತು.**

ಕುಲಸಚಿವರು

ಕುಲಪತಿಗಳು

ಪ್ರಸ್ತುತ ಈ ಕಾರ್ಯಕ್ರಮಕ್ಕೆ ಬೇಡಿಕೆ ಇದ್ದು, ವಿದ್ಯಾರ್ಥಿಗಳು ಓದಿನ ಜೊತೆಗೆ Apprenticship Training ಮಾಡುವುದರಿಂದ, ಅವರಿಗೆ ತಿಂಗಳಿಗೆ ಕನಿಷ್ಠ ರೂ.10,000/- ಸ್ಟೆಫಂಡ್ ದೊರೆಯುತ್ತದೆ ಎಂಬ ಅಂಶವನ್ನು ಗಮನಿಸಲಾಯಿತು.

Team Lease EDTECH ಇವರು ನೀಡಿದ್ದ ಪ್ರಸ್ತಾವನೆಯನ್ನು ಪರಿಶೀಲಿಸಲಾಯಿತು. ಸದರಿಯವರ ಜೊತೆ BBA ಕಾರ್ಯಕ್ರಮದ ಸಂಯೋಜಕರು ಚರ್ಚೆ ನಡೆಸಿದ್ದು, Team Lease EDTECH ಅವರು ದಿನಾಂಕ: 12-11-2021 ರಂದು ನೀಡಿರುವ ಪತ್ರವನ್ನು ಸಭೆಯ ಗಮನಕ್ಕೆ ತಂದರು. ಅದರನ್ವಯ, ಅವರು ವಿದ್ಯಾರ್ಥಿಗಳಿಗೆ Apprenticeship ನೀಡಲು ವ್ಯವಸ್ಥೆ ಮಾಡುವುದಾಗಿ ತಿಳಿಸಿ, ಇದಕ್ಕಾಗಿ ಪ್ರತೀ ವಿದ್ಯಾರ್ಥಿಯಿಂದ ವಾರ್ಷಿಕ ರೂ.10,000/- ಗಳನ್ನು Apprenticeship Fee ಆಗಿ ಸಂಗ್ರಹಿಸಿ, ಅದರಲ್ಲಿ ವಿ.ವಿ.ಗೆ ಶೇಕಡ 20 ರಷ್ಟನ್ನು KSOU Apprenticeship Fee ಆಗಿ ನೀಡುವುದಾಗಿ ತಿಳಿಸಿರುತ್ತಾರೆ.

BBA ಕಾರ್ಯಕ್ರಮವು ವಿ.ವಿ.ಯ ಕಾರ್ಯಕ್ರಮವಾಗಿದ್ದು Apprenticship Training ನೀಡಲು ವಿವಿಧ ಸಂಸ್ಥೆಗಳೊಂದಿಗೆ ಒಪ್ಪಂದ ಮಾಡಿಕೊಳ್ಳಬೇಕಾಗಿರುತ್ತದೆ. ಈ ಕಾರ್ಯವನ್ನು ಪರಿಣಿತ ಸಂಸ್ಥೆಗೆ ವಹಿಸುವುದು ಸೂಕ್ತವಾಗಿರುತ್ತದೆ. ಈ ಕಾರ್ಯಕ್ರಮದ ಪ್ರವೇಶಾತಿ ಶುಲ್ಕ ಹಾಗು ಇನ್ನಿತರ ಶುಲ್ಕಗಳು ವಿ.ವಿ.ಯ ಖಾತೆಗೆ ಜಮೆಯಾಗುತ್ತದೆ. ವಿದ್ಯಾರ್ಥಿಗಳಿಗೆ ಸ್ಟೆಫಂಡ್ ಸಿಗುವುದರಿಂದ ಹೆಚ್ಚಿನ ಸಂಖ್ಯೆಯ ವಿದ್ಯಾರ್ಥಿಗಳು ವಿಶ್ವವಿದ್ಯಾನಿಲಯಕ್ಕೆ ಪ್ರವೇಶಾತಿ ಪಡೆಯುವಂತಾಗುತ್ತದೆ.

ತೀರ್ಮಾನ :

Team Lease EDTECH, ಅವರ ನೀಡಿರುವ ಪ್ರಸ್ತಾವನೆಯನ್ನು ಒಪ್ಪಲಾಯಿತು. Apprenticeship ಒಳಗೊಂಡಂತೆ ಹೊಸ BBA ಕಾರ್ಯಕ್ರಮವನ್ನು ರೂಪಿಸಲು ಸಂಯೋಜಕರಿಗೆ ತಿಳಿಸಲಾಯಿತು. ಹೊಸ BBA ಕಾರ್ಯಕ್ರಮದಲ್ಲಿ ಎರಡನೇ ಹಾಗು ಮೂರನೇ ವರ್ಷದಲ್ಲಿ Apprenticship Training ನೀಡಬೇಕೆಂದು ತಿಳಿಸಲಾಯಿತು. Team Lease EDTECH, ಅವರು ಪ್ರಸ್ತಾಪಿಸಿರುವ ಶೇಕಡ 20ರ ಬದಲಿಗೆ ಶೇಕಡ 30 ರಷ್ಟನ್ನು Apprenticeship Fee ಆಗಿ ವಿ.ವಿ.ಗೆ ನೀಡುವಂತೆ ತಿಳಿಸಲು ಸೂಚಿಸಲಾಯಿತು. ಸದರಿಯವರ ಜೊತೆಗೆ ಒಪ್ಪಂದ ಮಾಡಿಕೊಳ್ಳಲು ತೀರ್ಮಾನಿಸಲಾಯಿತು. ಒಪ್ಪಂದ ಪತ್ರವನ್ನು ವಿ.ವಿ.ಯ ಕಾನೂನು ಸಲಹೆಗಾರರ ಸಲಹೆ ಮೇರೆಗೆ ಸಿದ್ಧಪಡಿಸಲು ಸೂಚಿಸಲಾಯಿತು. ಸದರಿ ವಿದ್ಯಾರ್ಥಿಗಳಿಗೆ ಸಂಸ್ಥೆಗಳು Apprenticeship Appointment ಪತ್ರ ನೀಡಿದ ನಂತರ, ಅಂತಹ ವಿದ್ಯಾರ್ಥಿಗಳಿಂದ Apprenticeship Fee ಸಂಗ್ರಹಿಸಲು ಸೂಚಿಸಲು ತಿಳಿಸಲಾಯಿತು ಹಾಗು ಸದರಿಯವರು ಇತರೆ ವಿದ್ಯಾ ಸಂಸ್ಥೆಗಳೊಂದಿಗೆ ಮಾಡಿಕೊಂಡಿರುವ ಇಂತಹ ಒಪ್ಪಂದ ಪ್ರತಿಗಳನ್ನು ವಿ.ವಿ.ಗೆ ಸಲ್ಲಿಸುವಂತೆ, ಸೂಚಿಸಲು ತೀರ್ಮಾನಿಸಲಾಯಿತು.

ಕುಲಸಚಿವರು | ಕುಲಪತಿಗಳು

## ವಿಷಯ ಸಂಖ್ಯೆ: 58.06

ವಿಷಯ : 2021–22ರ ಶೈಕ್ಷಣಿಕ ಸಾಲಿನಲ್ಲಿ, ವಿವಿಧ ಸಾಲಿನ, ವಿವಿಧ ಶಿಕ್ಷಣಕ್ರಮಗಳ, ವಿದ್ಯಾರ್ಥಿಗಳಿಗೆ ಪರೀಕ್ಷೆ/ ಫಲಿತಾಂಶ ನೀಡಲು ಕೈಗೊಳ್ಳಬೇಕಾದ ರೂಪುರೇಷೆಗಳನ್ನು ಸಿದ್ಧಪಡಿಸಿ ಅಧಿಸೂಚನೆಗೊಳಿಸಿರುವ ಅನುಸಮರ್ಥನೆಗೊಳಿಸುವ ಬಗ್ಗೆ.

ಉಲ್ಲೇಖ : 1. ಸಂಖ್ಯೆ : ಕರಾಮುವಿ/ಡೀನ್(ಶೈ)–01/2021–22 (C.No.10577), ದಿನಾಂಕ: 16–09–2021.

2. ದಿನಾಂಕ: 17–09–2021 ರಂದು ನಡೆದ ಸಮಿತಿ ಸಭೆಯ ಶಿಫಾರಸ್ಸು.
3. ಮಾನ್ಯ ಕುಲಪತಿಗಳ ಅನುಮೋದನೆ ದಿನಾಂಕ: 21–09–2021.
4. ಸಂಖ್ಯೆ : ಕರಾಮುವಿ/ಡೀನ್(ಶೈ)–01/2021–22 (C.No.10577), ದಿನಾಂಕ: 22–09–2021.

****

2021–22ರ ಶೈಕ್ಷಣಿಕ ಸಾಲಿನಲ್ಲಿ, Covid-19 ಹಿನ್ನೆಲೆಯಲ್ಲಿ, ವಿವಿಧ ಸಾಲಿನ, ವಿವಿಧ ಶಿಕ್ಷಣಕ್ರಮಗಳ, ವಿದ್ಯಾರ್ಥಿಗಳಿಗೆ ಪರೀಕ್ಷೆ/ ಫಲಿತಾಂಶ ನೀಡಲು ಕೈಗೊಳ್ಳಬೇಕಾದ ರೂಪುರೇಷೆಗಳನ್ನು ಸಿದ್ಧಪಡಿಸಲು ರಚಿತವಾಗಿರುವ ಉಲ್ಲೇಖ (1) ರ ಸಮಿತಿಯು ಉಲ್ಲೇಖ (2) ರಂತೆ ಸಭೆ ನಡೆಸಿ, ಯುಜಿಸಿಯ ಪರೀಕ್ಷಾ ಸಂಬಂಧಿತ ಮಾರ್ಗಸೂಚಿ ಮತ್ತು ಕರ್ನಾಟಕ ಸರ್ಕಾರದ ನಡಾವಳಿಯ ಪ್ರತಿಗಳನ್ನು ಪರಾಮರ್ಶಿಸಿ ಶಿಫಾರಸ್ಸು ಮಾಡಿದ್ದು, ಅದನ್ನು ಅನುಷ್ಠಾನಗೊಳಿಸಲು ವಿ.ವಿ.ಯ ಶಾಸನಬದ್ಧ ಪ್ರಾಧಿಕಾರಿಗಳ ಅನುಮೋದನೆಯನ್ನು ಕಾಯ್ದಿರಿಸಿ, ಮಾನ್ಯ ಕುಲಪತಿಗಳು ಉಲ್ಲೇಖ (3) ರ ಅನುಮೋದನೆಯ ಮೇರೆಗೆ ಉಲ್ಲೇಖ (4) ರಂತೆ ಅಧಿಸೂಚನೆ ಹೊರಡಿಸಲಾಗಿದೆ (ಪ್ರತಿ ಲಗತ್ತಿಸಿದೆ). ಸದರಿ ವಿಷಯವನ್ನು ಶೈಕ್ಷಣಿಕ ಮಂಡಳಿಯ ಸಭೆ ಮುಂದೆ ಅನುಸಮರ್ಥನೆಗಾಗಿ ಮಂಡಿಸಿದೆ.

<u>ತೀರ್ಮಾನ</u> :

**2021–22ರ ಶೈಕ್ಷಣಿಕ ಸಾಲಿನಲ್ಲಿ, ವಿವಿಧ ಸಾಲಿನ, ವಿವಿಧ ಶಿಕ್ಷಣಕ್ರಮಗಳ, ವಿದ್ಯಾರ್ಥಿಗಳಿಗೆ ಪರೀಕ್ಷೆ/ ಫಲಿತಾಂಶ ನೀಡಲು ಕೈಗೊಳ್ಳಬೇಕಾದ ರೂಪುರೇಷೆಗಳನ್ನು ಸಿದ್ಧಪಡಿಸಿ ಅಧಿಸೂಚನೆಗೊಳಿಸಿರುವ ಬಗ್ಗೆ ಅನುಸಮರ್ಥನೆಗೊಳಿಸಲಾಯಿತು.**

**ಕುಲಸಚಿವರು** **ಕುಲಪತಿಗಳು**

**ವಿಷಯ ಸಂಖ್ಯೆ: 58.07**

**ವಿಷಯ :** 2021–22ನೇ ಸಾಲಿನ July Cycle (November-December) ನ ವಿವರಣಾ ಪುಸ್ತಕಗಳನ್ನು ಅನುಮೋದಿಸುವ ಬಗ್ಗೆ.

****

2021–22ನೇ ಸಾಲಿನ July Cycle (November-December) ನ ಪ್ರವೇಶಾತಿ ಪ್ರಾರಂಭಿಸುವ ಸಲುವಾಗಿ ಈ ಕೆಳಕಂಡ ಕಾರ್ಯಕ್ರಮಗಳ ವಿವರಣಾ ಪುಸ್ತಕಗಳನ್ನು ಸಿದ್ಧಪಡಿಸಲು ಕಚೇರಿ ಆದೇಶ ಸಂಖ್ಯೆ: ಕರಾಮುವಿ/ಡೀನ್(ಶೈ)–01/2020–21, ದಿನಾಂಕ: 06–07–2021 ರ ಪ್ರಕಾರ ಅಧ್ಯಾಪಕರ ಸಮಿತಿಯನ್ನು ರಚಿಸಿ ಪರಿಷ್ಕೃತ ಕಚೇರಿ ಆದೇಶ ಹೊರಡಿಸಲಾಗಿತ್ತು. ಪ್ರಸ್ತುತ, ಸದರಿ ಸಮಿತಿಯು ವಿ.ವಿ.ಯ ಆಯಾಯ ಕಾರ್ಯಕ್ರಮಗಳ ಅಧ್ಯಾದೇಶಗಳು ಮತ್ತು UGC ನಿಯಾಮವಳಿಯ ಪ್ರಕಾರ ವಿವರಣಾ ಪುಸ್ತಕಗಳನ್ನು ಸಿದ್ಧಪಡಿಸಿ ಸಲ್ಲಿಸಲಾಗಿ, ಇವುಗಳನ್ನು ಈಗಾಗಲೇ ಪ್ರವೇಶಾತಿ ಪ್ರಕ್ರಿಯೆಗಾಗಿ ವಿಶ್ವವಿದ್ಯಾನಿಲಯದ ವೆಬ್ ಸೈಟ್ **(www.ksoumysuru.ac.in)** ನಲ್ಲಿ ಪ್ರಕಟಿಸಲಾಗಿದೆ ಮತ್ತು ಪ್ರವೇಶಾತಿ ಪ್ರಕ್ರಿಯೆ ಚಾಲನೆಯಲ್ಲಿರುತ್ತದೆ.

**ಪ್ರಕಟಿಸಲಾಗಿರುವ ವಿವರಣಾ ಪುಸ್ತಕಗಳ ವಿವರ :**

1. **B.A, B.Com, B.Lib.I.Sc, B.B.A (Marketing Management), B.Sc (General), B.Sc (Home Science), B.Sc (Information Technology) and B.C.A** Programmes
2. **M.A:** (Kannada, English, Hindi, Telugu, Sanskrit, Urdu, Education, History, Economics, Political Science, Public Administration, Sociology, Ancient History and Archeology, Journalism and Mass Communication).
3. **M.Com** Programme
4. **M.Sc.:** (Bio-Chemistry, Bio-Technology, Chemistry, Clinical Nutrition and Dietetics, Environmental Science, Computer Science, Geography, Information Technology, Mathematics, Micro Biology, Physics, Psychology, Botany, Zoology, Food and Nutrition Science) **M.Lib.I.Sc** Programme
5. **MBA** Programme
6. **Post – Graduate Certificate Programmes:** [Post Graduate Certificate in English (PGCE), Post Graduate Certificate in Communicative English (PGCCE), Post Graduate Certificate in Human Resource Management (PGCHRM), Post Graduate Certificate in Financial Management (PGCFM), Post Graduate Certificate in Business Administration (PGCBA), Post Graduate Certificate in Marketing Management (PGCMM), Post Graduate Certificate in Nutrition and Deities (PGCND), Post Graduate Certificate in Journalism and Mass Communication (PGCJMC), Post Graduate Certificate in Kuvempu Sahithya (PGCKS), Post Graduate Certificate in Business Law (PGCBL), Post Graduate Certificate in Information Technology (PGCIT), Post Graduate Certificate in Computer Application (PGCCA), Post Graduate Certificate in Ambedkar Studies (PGCAS)]
7. **Diploma Programmes :** [Diploma in Kannada (DIK), Diploma in Journalism (DIJ), Diploma in Nutrition and Health Education (DNHE), Diploma in Information Technology (DIT), Diploma in Computer Application (DCA)]
8. **Certificate Programmes:** [Certificate in Panchayath Raj (CPR), Certificate in Nutrition and Food (CNF), Certificate in Information Communication Technology (CICT)]

ಸದರಿ ವಿವರಣಾ ಪುಸ್ತಕಗಳನ್ನು ಶೈಕ್ಷಣಿಕ ಮಂಡಳಿ ಸಭೆಯ ಅನುಸಮರ್ಥನೆಗಾಗಿ ಮಂಡಿಸಿದೆ.

ಕುಲಸಚಿವರು ಕುಲಪತಿಗಳು

ತೀರ್ಮಾನ :

**2021–22ನೇ ಸಾಲಿನ July Cycle (November-December) ನ ಪ್ರವೇಶಾತಿ ಪ್ರಾರಂಭಿಸುವ ಸಲುವಾಗಿ ಈ ಮೇಲ್ಕಂಡ ಕಾರ್ಯಕ್ರಮಗಳ ವಿವರಣಾ ಪುಸ್ತಕಗಳನ್ನು ನಿಯಮಾನುಸಾರ ಸಿದ್ಧಪಡಿಸಿ ವಿಶ್ವವಿದ್ಯಾನಿಲಯದ ವೆಬ್‌ಸೈಟ್ www.ksoumysuru.ac.in ನಲ್ಲಿ ಪ್ರಕಟಿಸಲಾಗಿರುವುದನ್ನು ಹಾಗು ಪ್ರವೇಶಾತಿ ಆರಂಭಿಸಿರುವುದನ್ನು ಅನುಸಮರ್ಥನೆಗೊಳಿಸಲಾಯಿತು.**

**ವಿಷಯ ಸಂಖ್ಯೆ: 58.08**

ವಿಷಯ : ಸರ್ಟಿಫಿಕೇಟ್ ಕೋರ್ಸ್ ಇನ್ ಕನ್ನಡ, ಶಿಕ್ಷಣಕ್ರಮದ ಪ್ರವೇಶಾತಿಯನ್ನು ಸ್ಥಗಿತಗೊಳಿಸುವ ಬಗ್ಗೆ.

****

ಸರ್ಟಿಫಿಕೇಟ್ ಕೋರ್ಸ್ ಇನ್ ಕನ್ನಡ, ಶಿಕ್ಷಣಕ್ರಮವು ವಿಶ್ವವಿದ್ಯಾನಿಲಯದ ಈ ಹಿಂದಿನ ಹಳೆಯ ಶೈಕ್ಷಣಿಕ ಕಾರ್ಯಕ್ರಮ ಆಗಿತ್ತು, ಪ್ರಸ್ತುತ, ಕೇಂದ್ರೀಯ ದಕ್ಷಿಣ ಭಾರತೀಯ ಭಾಷಾ ಸಂಸ್ಥಾನ ಮತ್ತು ಕನ್ನಡ ಸಾಹಿತ್ಯ ಪರಿಷತ್‌ಗಳಲ್ಲಿ ಸದರಿ ಸರ್ಟಿಫಿಕೇಟ್ ಕೋರ್ಸ್‌ಗೆ ಉಚಿತ ಪ್ರವೇಶಾತಿ ನೀಡುತ್ತಿರುವುದರಿಂದ ನಮ್ಮ ವಿ.ವಿ.ಯಲ್ಲಿ ಈ ವಿಷಯಕ್ಕೆ ಪ್ರವೇಶಾತಿಯು ಮೂರ್‍ನಾಲ್ಕು ಸಂಖ್ಯೆಗೆ ಕುಸಿದು ನಿಂತಿದೆ. ಅಂತೆಯೇ, ನಮ್ಮ ಕೋರ್ಸ್‌ನ ಪಠ್ಯಕ್ರಮವು ಸರಿ ಸುಮಾರು 50 ವರ್ಷಗಳ ಹಳೆಯದಾಗಿದೆ. ಎರಡೇ ಪತ್ರಿಕೆಯನ್ನಿಟ್ಟುಕೊಂಡಿರುವ ಪಠ್ಯಕ್ರಮವು UGC ನಿಯಮಾವಳಿ CBCS Credits ಗನುಗುಣವಾಗಿ ಸಕಾಲಿಕವಾಗಿರುವುದಿಲ್ಲ.

ಈ ಸಂಬಂಧ ಮಾನ್ಯ ಕುಲಪತಿಗಳ ನಿರ್ದೇಶನದ ಮೇರೆಗೆ ಮಾನ್ಯ ಕುಲಪತಿಗಳ ಆಪ್ತ ಶಾಖೆಯ ವಿಶೇಷ ಕರ್ತವ್ಯಾಧಿಕಾರಿಗಳು ಮತ್ತು CIQA ನಿರ್ದೇಶಕರುಗಳನ್ನೊಳಗೊಂಡಂತೆ ನಡೆದ ಸಭೆಯಲ್ಲಿ ಬಹು ಭಾಷೆಯಿಂದ ಕೂಡಿರುವ ಸದರಿ ಕೋರ್ಸ್‌ನ್ನು ಜನಪ್ರಿಯಗೊಳಿಸುವ ದೃಷ್ಟಿಯಿಂದ ಉತ್ತಮ ಬಾಹ್ಯ ತಜ್ಞರಿಂದ ಪಠ್ಯವನ್ನು ರೂಪಿಸಿ ಮುಂದಿನ 2022ನೇ ಶೈಕ್ಷಣಿಕ ಸಾಲಿನಿಂದ ಚಾಲ್ತಿಗೆ ತರಲು ತೀರ್ಮಾನಿಸಲಾಗಿತ್ತು. ಅಂತೆಯೇ, ಕನ್ನಡ ಸ್ನಾತಕ (UG BOS) ಅಧ್ಯಯನ ಮಂಡಳಿಯು ಸದರಿ ಪಠ್ಯಕ್ರಮಗಳನ್ನು ರೂಪಿಸುವ ಪ್ರಕ್ರಿಯೆಯನ್ನು ತೊಡಗಿಸಿಕೊಂಡಿರುವುದರಿಂದ, ಸದ್ಯಕ್ಕೆ 2021–22ನೇ ಸಾಲಿನ July Cycle (November-December) ನ ಪ್ರವೇಶಾತಿ ಪ್ರಕಟಣೆಯನ್ನು ಮುಂದೂಡುವಂತೆ ಅಧ್ಯಕ್ಷರು ಸ್ನಾತಕ ಅಧ್ಯಯನ ಮಂಡಳಿ, ಕನ್ನಡ ಅಧ್ಯಯನ ಮತ್ತು ಸಂಶೋಧನಾ ವಿಭಾಗ, ಇವರು ಪತ್ರದ ಮುಖಾಂತರ ತಿಳಿಸಿರುತ್ತಾರೆ. (ಪ್ರತಿ ಲಗತ್ತಿಸಿದೆ)

ಈ ಸಂಬಂಧ ಸರ್ಟಿಫಿಕೇಟ್ ಕೋರ್ಸ್ ಇನ್ ಕನ್ನಡ, ಶಿಕ್ಷಣಕ್ರಮದ ಪ್ರವೇಶಾತಿಯನ್ನು 2021–22ನೇ ಸಾಲಿನ July Cycle (November-December) ನಲ್ಲಿ ಸ್ಥಗಿತಗೊಳಿಸಿ, ಮುಂಬರುವ ಶೈಕ್ಷಣಿಕ ಸಾಲಿನಲ್ಲಿ ಹೊಸ ಪಠ್ಯಕ್ರಮ ರಚಿತವಾದ ನಂತರ ಪ್ರಾರಂಭಿಸಲು ಶೈಕ್ಷಣಿಕ ಮಂಡಳಿಯ ಸಭೆಯ ಚರ್ಚೆ ಮತ್ತು ನಿರ್ಣಯಕ್ಕಾಗಿ ಮಂಡಿಸಿದೆ.

ಕುಲಸಚಿವರು　　　　　　　　　　　　ಕುಲಪತಿಗಳು

<u>ಚರ್ಚೆ :</u>

ಸದರಿ ಕಾರ್ಯಕ್ರಮದ ಪ್ರವೇಶಾತಿ ಈಗಾಗಲೇ 2021–22 July Cycle (November-December) ನಲ್ಲಿ ಆರಂಭವಾಗಿದ್ದು, ಈವರೆಗೆ ಇಬ್ಬರು ವಿದ್ಯಾರ್ಥಿಗಳು ಪ್ರವೇಶಾತಿ ಪಡೆದಿರುವುದನ್ನು ವಿಶೇಷಾಧಿಕಾರಿಗಳು ಸಭೆ ಗಮನಕ್ಕೆ ತಂದರು. ಈ ಸಂಬಂಧ ಸರ್ಟಿಫಿಕೇಟ್ ಕೋರ್ಸ್ ಇನ್ ಕನ್ನಡ, ಶಿಕ್ಷಣಕ್ರಮದ ಪ್ರವೇಶಾತಿಯನ್ನು 2021–22ನೇ ಸಾಲಿನ July Cycle (November-December) ನಲ್ಲಿ ಸ್ಥಗಿತಗೊಳಿಸಿ, ಮುಂಬರುವ ಶೈಕ್ಷಣಿಕ ಸಾಲಿನಲ್ಲಿ ಹೊಸ ಪಠ್ಯಕ್ರಮ ರಚಿತವಾದ ನಂತರ ಪ್ರಾರಂಭಿಸಲು ಕನ್ನಡ ಅಧ್ಯಯನ ಮತ್ತು ಸಂಶೋಧನಾ ವಿಭಾಗವು ಉದ್ದೇಶಿಸಿರುವುದನ್ನು ಶೈಕ್ಷಣಿಕ ಮಂಡಳಿಯು ಗಮನಿಸಿತು.

<u>ತೀರ್ಮಾನ</u> :

ಸದರಿ ಸಾಲಿಗೆ ನೊಂದಣಿಯಾಗಿರುವ ವಿದ್ಯಾರ್ಥಿಗಳಿಗೆ ಮುಂದಿನ ಶೈಕ್ಷಣಿಕ ಸಾಲಿನಿಂದ ಹೊಸ ಪಠ್ಯಕ್ರಮದಂತೆ ಕಾರ್ಯಕ್ರಮ ನಡೆಸಲು ತೀರ್ಮಾನಿಸಲಾಯಿತು ಹಾಗು ಈ ಶೈಕ್ಷಣಿಕ ಸಾಲಿಗೆ ಪ್ರವೇಶಾತಿಯನ್ನು ಸ್ಥಗಿತಗೊಳಿಸಲು ತೀರ್ಮಾನಿಸಲಾಯಿತು.

## ವಿಷಯ ಸಂಖ್ಯೆ: 58.09

ವಿಷಯ : ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದಲ್ಲಿ ಭಾಷಾಂತರ ವಿಭಾಗವನ್ನು ಸ್ಥಾಪಿಸುವ ಬಗ್ಗೆ.

ಉಲ್ಲೇಖ : 1. ಸಂಖ್ಯೆ : ಕರಾಮುವಿ/ಡೀನ್(ಶೈ)–01/2021–22, ದಿನಾಂಕ : 23–07–2021.
2. ಸಂಖ್ಯೆ : ಕರಾಮುವಿ/ಆವಿ/ಜಿಎಲ್–2/687/2021–22, ದಿನಾಂಕ : 29.09.2021.

****

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದಲ್ಲಿ ಭಾಷಾಂತರ ವಿಭಾಗವನ್ನು ಸ್ಥಾಪಿಸಿ, ಸದರಿ ಭಾಷಾಂತರ ವಿಭಾಗಕ್ಕೆ ಸಂಯೋಜನಾಧಿಕಾರಿಯನ್ನಾಗಿ ಡಾ. ಚಂದ್ರೇಗೌಡ .ಎನ್.ಆರ್, ಸಹಾಯಕ ಪ್ರಾಧ್ಯಾಪಕರು, ಕನ್ನಡ ಅಧ್ಯಯನ ಮತ್ತು ಸಂಶೋಧನಾ ವಿಭಾಗ ಮತ್ತು ಸಹಾಯಕ ಸಂಯೋಜನಾಧಿಕಾರಿಯನ್ನಾಗಿ ಡಾ. ವಿಜಯ ಕುಮಾರ್ ಎ.ವೈ, ಸಹಾಯಕ ಭಾಷಾಂತರಕಾರರು, ಇವರುಗಳನ್ನು ನೇಮಿಸಿ ಕ್ರಮವಹಿಸಲು ಮಾನ್ಯ ಕುಲಪತಿ ಅವರು ನಿರ್ದೇಶನ ನೀಡಿರುತ್ತಾರೆ. ಅದರಂತೆ, ಭಾಷಾಂತರ ವಿಭಾಗವನ್ನು ಸ್ಥಾಪಿಸುವ ಸಂಬಂಧ ಶೈಕ್ಷಣಿಕ ಮಂಡಳಿಯ ಅನುಮೋದನೆ ಪಡೆಯುವ ನಿಟ್ಟಿನಲ್ಲಿ ವಿಷಯವನ್ನು ಚರ್ಚೆ ಮತ್ತು ನಿರ್ಣಯಕ್ಕಾಗಿ ಮಂಡಿಸಿದೆ.

ಕುಲಸಚಿವರು　　　　　　　　　　　　ಕುಲಪತಿಗಳು

ತೀರ್ಮಾನ :

ಸದರಿ ವಿಷಯದ ಬಗ್ಗೆ ಹೆಚ್ಚಿನ ಮಾಹಿತಿಯೊಂದಿಗೆ, ಮುಂದಿನ ಶೈಕ್ಷಣಿಕ ಸಭೆಯಲ್ಲಿ ಮಂಡಿಸಲು ಡೀನ್ (ಶೈಕ್ಷಣಿಕ) ರವರಿಗೆ ಸೂಚಿಸಲಾಯಿತು.

**ವಿಷಯ ಸಂಖ್ಯೆ: 58.10**

ವಿಷಯ : Policy Document on Development of Self-Learning Material (SLM) in Print ಗೆ ಅನುಮೋದನೆ ಕೋರುವ ಬಗ್ಗೆ.

*****

ವಿಶ್ವವಿದ್ಯಾನಿಲಯಕ್ಕೆ NAAC ಮಾನ್ಯತೆಯನ್ನು ಪಡೆಯುವ ಸಂಬಂಧ NAAC Manual ನ Criteria-2 ರ 2.3.1 Development of Self-Learning Material (SLM) in Print ರಲ್ಲಿ ತಿಳಿಸಿರುವಂತೆ ವಿಶ್ವವಿದ್ಯಾನಿಲಯದ ಮುದ್ರಿತ ಸ್ವಕಲಿಕಾ ಸಾಮಗ್ರಿಗಳನ್ನು ಅಭಿವೃದ್ಧಿ ಪಡಿಸುವ ಸಂಬಂಧದ ಕಾರ್ಯವಿಧಾನಕ್ಕೆ (Policy Document on Development of Self-Learning Material (SLM) in Print) **20** weightage points ಗಳನ್ನು ನಿಗಧಿಪಡಿಸಲಾಗಿರುತ್ತದೆ.

ಈ ಸಂಬಂಧ ವಿಶ್ವವಿದ್ಯಾನಿಲಯದ Policy Documents on SLM ಅನ್ನು ಸಿದ್ಧಪಡಿಸಲು ಮಾನ್ಯ ಕುಲಪತಿಗಳ ಅನುಮೋದನೆ ಮೇರೆಗೆ ತಜ್ಞರ ಸಮಿತಿಯನ್ನು ರಚಿಸಲಾಗಿದ್ದು, ಸದರಿ ಸಮಿತಿಯು ದಿನಾಂಕ: **06.11.2021** ಹಾಗೂ **12.11.2021** ರಂದು ಸಭೆ ಸೇರಿ Policy Document on SLM ನ ಕರಡನ್ನು ಸಿದ್ಧಪಡಿಸಲಾಗಿರುತ್ತದೆ.

Policy Document on Development of SLM in Print ಅನ್ನು ಶೈಕ್ಷಣಿಕ ಮಂಡಳಿ ಸಭೆಯ ಅವಗಾಹನೆಗೆ ಹಾಗೂ ಅನುಮೋದನೆ ಕೋರಿ ವಿಷಯ ಮಂಡಿಸಿದೆ.

ತೀರ್ಮಾನ :

**Policy Document on Development of Self-Learning Material (SLM) in Print ಗೆ ಅನುಮೋದಿಸಲಾಯಿತು.**

ಕುಲಸಚಿವರು

ಕುಲಪತಿಗಳು

<u>ಅಧ್ಯಕ್ಷರ ಅಪ್ಪಣೆ ಮೇರೆಗೆ ಇತರೆ ವಿಷಯಗಳು</u>

## ವಿಷಯ ಸಂಖ್ಯೆ: 58.11

ವಿಷಯ: ಸಲಹಾ ಸಮಿತಿ ಸಭೆಯಲ್ಲಿ ಪರೀಕ್ಷಾಂಗ ವಿಭಾಗದ ಶೈಕ್ಷಣಿಕ ಕಾರ್ಯಚಟುವಟಿಕೆಗಳ ಚರ್ಚೆ ಮತ್ತು ನಿರ್ಣಯಕ್ಕಾಗಿ ಸಭೆ ಏರ್ಪಡಿಸಿರುವ ಬಗ್ಗೆ.
ಉಲ್ಲೇಖ: ಕಚೇರಿ ಆದೇಶ ಸಂಖ್ಯೆ: ಕರಾಮುವಿ/ಪವಿ/ಸಿಬ್ಬಂದಿ–01/II/2020–21
ದಿನಾಂಕ: 15.03.2021

*******

ದಿನಾಂಕ: 12.11.2021ರ ಶುಕ್ರವಾರ ಮಾನ್ಯ ಕುಲಸಚಿವರು(ಪರೀಕ್ಷಾಂಗ)ರವರ ಅಧ್ಯಕ್ಷತೆಯಲ್ಲಿ ಸ್ನಾತಕ ಮತ್ತು ಸ್ನಾತಕೋತ್ತರ ಶೈಕ್ಷಣಿಕ ಕಾರ್ಯಚಟುವಟಿಕೆಯ ವಿದ್ಯಾರ್ಥಿಗಳ ಕುಂದುಕೊರತೆಗಳ ಬಗೆಗೆ ಚರ್ಚಿಸಿ ಸಲಹಾ ಸಮಿತಿಯಲ್ಲಿ ತೆಗೆದುಕೊಂಡ ಸಭಾ ನಡಾವಳಿಯ ಶಿಫಾರಸ್ಸುಗಳನ್ನು ಶೈಕ್ಷಣಿಕ ಮಂಡಳಿಯ ಚರ್ಚೆ ಹಾಗು ನಿರ್ಣಯಕ್ಕೆ ಸಭೆಯಲ್ಲಿ ವಿಷಯ ಮಂಡಿಸಿದೆ.

<u>ತೀರ್ಮಾನ</u> :

**ಸಲಹಾ ಸಮಿತಿ ಸಭೆಯ ವರದಿಯನ್ನು ಪರಿಶೀಲಿಸಲಾಯಿತು. ಸದರಿ ವರದಿಯಲ್ಲಿ ಇನ್ನೂ ಹೆಚ್ಚಿನ ಸ್ಪಷ್ಟತೆಯ ಅವಶ್ಯಕತೆಯಿರುವುದರಿಂದ ಪೂರ್ಣ ಮಾಹಿತಿಯೊಂದಿಗೆ ಮುಂದಿನ ಶೈಕ್ಷಣಿಕ ಸಭೆಗೆ ಮಂಡಿಸಲು ಸೂಚಿಸಲಾಯಿತು.**

## ವಿಷಯ ಸಂಖ್ಯೆ: 58.12

ವಿಷಯ : ಕಲಿಕಾರ್ಥಿ ಸಹಾಯ ಕೇಂದ್ರಗಳಿಗೆ ಹೆಚ್ಚಿನ ಕಾರ್ಯಭಾರ ವಹಿಸುವ ಬಗ್ಗೆ.

****

2021–22ನೇ ಸಾಲಿನಿಂದ ಯುಜಿಸಿ ಅನುಮೋದನೆ ಪಡೆದು ಕರಾಮುವಿಯಲ್ಲಿ ಹೊಸದಾಗಿ ಬಿಎಸ್ಸಿ ಹಾಗು ಇನ್ನಿತರೆ ಶಿಕ್ಷಣ ಕಾರ್ಯಕ್ರಮಗಳನ್ನು ಆರಂಭಿಸಲಾಗುತ್ತಿದೆ. ಕರ್ನಾಟಕದಾದ್ಯಂತ ಎಲ್ಲಾ ಕಾರ್ಯಕ್ರಮಗಳಿಗೆ ಹೆಚ್ಚಿನ ಪ್ರವೇಶಾತಿ ಕಲ್ಪಿಸುವ ಸಲುವಾಗಿ ಸ್ನಾತಕ/ ಸ್ನಾತಕೋತ್ತರ ಸಂಪರ್ಕ ಕಾರ್ಯಕ್ರಮ ನಡೆಸುವುದು, ಆಂತರಿಕ ನಿಬಂಧನೆಗಳ ಮೌಲ್ಯಮಾಪನ, ವಿಜ್ಞಾನ ವಿಷಯಗಳ ಲ್ಯಾಬ್‌ಗಳನ್ನು, ಪರೀಕ್ಷೆಗಳನ್ನು ನಡೆಸುವುದು, ಮುಂತಾದ ಶೈಕ್ಷಣಿಕ ಚಟುವಟಿಕೆಗಳನ್ನು ಕಲಿಕಾರ್ಥಿ ಸಹಾಯ ಕೇಂದ್ರಗಳ ಮೂಲಕ ನಡೆಸುವುದು ಅವಶ್ಯಕವಾಗಿದೆ ಎಂದು ಮಾನ್ಯ ಕುಲಪತಿಗಳು ತಿಳಿಸಿರುತ್ತಾರೆ. ಈ ಹಿನ್ನೆಲೆಯಲ್ಲಿ ಕಲಿಕಾರ್ಥಿ ಸಹಾಯ ಕೇಂದ್ರಗಳಿಗೆ ಹೆಚ್ಚಿನ ಕಾರ್ಯಭಾರ ವಹಿಸುವ ಬಗ್ಗೆ ಶೈಕ್ಷಣಿಕ ಮಂಡಳಿ ಸಭೆಯ ಚರ್ಚೆ ಮತ್ತು ನಿರ್ಣಯಕ್ಕಾಗಿ ವಿಷಯ ಮಂಡಿಸಿದೆ.

ಕುಲಸಚಿವರು ಕುಲಪತಿಗಳು

ಚರ್ಚೆ :

ಕಲಿಕಾರ್ಥಿ ಸಹಾಯ ಕೇಂದ್ರಗಳಲ್ಲಿ ಈಗಾಗಲೇ ಬಿಎ/ಬಿಕಾಂ ವಾರಾಂತ್ಯ ಸಮಾಲೋಚನ ಕಾರ್ಯಕ್ರಮ ನಡೆಸುತ್ತಿದ್ದು, ಬಿಎಸ್ಸಿ, ಎಂಸ್ಸಿ ಹಾಗು ಇನ್ನಿತರೆ ಶೈಕ್ಷಣಿಕ ಕಾರ್ಯಕ್ರಮಗಳ ವಾರಾಂತ್ಯ ಸಮಾಲೋಚನ ಕಾರ್ಯಕ್ರಮ/ ಸಂಪರ್ಕ ಕಾರ್ಯಕ್ರಮಗಳನ್ನು ಕಲಿಕಾರ್ಥಿ ಸಹಾಯ ಕೇಂದ್ರಗಳ ಮೂಲಕ ಏರ್ಪಡಿಸಬಹುದಾಗಿದೆ. ಪ್ರಸ್ತುತ ಕಲಿಕಾರ್ಥಿ ಸಹಾಯ ಕೇಂದ್ರಗಳಿಗೆ ಯಾವುದೇ ಮಾಸಿಕ ಸಂಭಾವನೆ (ಪ್ರವೇಶಾತಿ ಪೂರ್ವ ಸಮಾಲೋಚನ ಸಂಭಾವನೆ ಹೊರತುಪಡಿಸಿ) ನೀಡುತ್ತಿಲ್ಲ ಎಂಬುದನ್ನು ಸಭೆ ಗಮನಿಸಿತು. ಅಂತೆಯೇ, ಆಂತರಿಕ ನಿಬಂಧನೆಗಳ ಮೌಲ್ಯಮಾಪನ, ವಿಜ್ಞಾನ ವಿಷಯಗಳ ಲ್ಯಾಬ್‌ಗಳನ್ನು, ಪರೀಕ್ಷೆಗಳನ್ನು ನಡೆಸುವುದು, ಮುಂತಾದ ಶೈಕ್ಷಣಿಕ ಚಟುವಟಿಕೆಗಳನ್ನು ಕಲಿಕಾರ್ಥಿ ಸಹಾಯ ಕೇಂದ್ರಗಳಿಗೆ ವಹಿಸಬಹುದಾಗಿದೆ.

ಅದರಂತೆ ಪ್ರತಿ ವಿದ್ಯಾರ್ಥಿಯಿಂದ ಪಡೆದ ಬೋಧನಾ ಶುಲ್ಕದಿಂದ ಶೇಕಡ 25% ರಷ್ಟು ನೀಡಲು ಸಭೆಯಲ್ಲಿ ಚರ್ಚೆ ಮಾಡಲಾಯಿತು. ಆದರೆ ಬೋಧನಾ ಶುಲ್ಕದಲ್ಲಿ 25% ರಷ್ಟು ಅಧ್ಯಯನ ಕೇಂದ್ರಗಳಿಗೆ ನೀಡುವುದರಿಂದ ಕಲಾ ಮತ್ತು ವಾಣಿಜ್ಯ ವಿಭಾಗಗಳ ಯುಜಿ ಮತ್ತು ಪಿಜಿ ಕಾರ್ಯಕ್ರಮಗಳಿಗೆ ಹೆಚ್ಚಿನ ಹೊರೆಯಾಗುತ್ತದೆ. ಯಾಕೆಂದರೆ, ಈ ಕಾರ್ಯಕ್ರಮಗಳನ್ನು ರಾಜ್ಯದಾದ್ಯಂತ ಎಲ್ಲಾ ಜಿಲ್ಲಾ ಕೇಂದ್ರಗಳಲ್ಲಿ ನಡೆಸಬೇಕಾಗುತ್ತದೆ. ವಿದ್ಯಾರ್ಥಿಗಳಿಗೆ 25% ಶುಲ್ಕದಲ್ಲಿ ಕೊಡುವಾಗ ನಿಖರವಾದ ದಾಖಲೆಗಳನ್ನು ಪಡೆಯಲು ಕಷ್ಟವಾಗುತ್ತದೆ ಹಾಗು ಪ್ರತಿ ಅಧ್ಯಯನ ಕೇಂದ್ರಕ್ಕೆ ವಿದ್ಯಾರ್ಥಿಗಳನ್ನು ನಿಗದಿಪಡಿಸಿ ನೀಡಬೇಕಾಗಿರುತ್ತದೆ. ಸಂಪರ್ಕ ಕಾರ್ಯಕ್ರಮ ತರಗತಿ ಕಡ್ಡಾಯವಲ್ಲದಿದ್ದರಿಂದ ಎಲ್ಲಾ ವಿದ್ಯಾರ್ಥಿಗಳು ಸಂಪರ್ಕ ಕಾರ್ಯಕ್ರಮಗಳಿಗೆ ಭಾಗವಹಿಸುತ್ತಾರೆ ಎಂದು ಹೇಳಲು ಸಾಧ್ಯವಿಲ್ಲ. ಪ್ರಸ್ತುತ, ಅಂದಾಜು ಶೇಕಡ 20 ರಷ್ಟು ವಿದ್ಯಾರ್ಥಿಗಳು ಮಾತ್ರ ಸಂಪರ್ಕ ಕಾರ್ಯಕ್ರಮಕ್ಕೆ ಹಾಜರಾಗುತ್ತಾರೆ. ಹೀಗಾಗಿ ಕಲಾ, ವಾಣಿಜ್ಯ ಯುಜಿ ಪಿಜಿ ತರಗತಿಗಳಲ್ಲಿ ವಿಶ್ವವಿದ್ಯಾನಿಲಯವು ನೀಡುತ್ತಿರುವ ಸಂಭಾವನೆಯನ್ನು ಪರಿಷ್ಕರಿಸಿ ನೀಡುವುದು ಉಚಿತವಾಗುತ್ತದೆ.

<u>ತೀರ್ಮಾನ</u> :

ಕಲಿಕಾರ್ಥಿ ಸಹಾಯ ಕೇಂದ್ರಗಳಿಗೆ ಒಟ್ಟಾರೆಯಾಗಿ ಪ್ರವೇಶಾತಿ ಸಮಾಲೋಚನೆ, ಸಂಪರ್ಕ ಕಾರ್ಯಕ್ರಮ, ವಾರಾಂತ್ಯ ಸಮಾಲೋಚನೆ, ಆಂತರಿಕ ಮೌಲ್ಯಮಾಪನ, ಪ್ರಾಯೋಗಿಕ ಚಟುವಟಿಕೆಗಳು ಹಾಗು ಇನ್ನಿತರ ಎಲ್ಲಾ ಶೈಕ್ಷಣಿಕ ಚಟುವಟಿಕೆಗಳನ್ನು ಈ ಕೆಳಗಿನ ಕಾರ್ಯಕ್ರಮಗಳಿಗೆ ಸಂಬಂಧಿಸಿದಂತೆ ನಡೆಸಿದರೆ ಹಂಚಿಕೆಯಾಗಿರುವ ತಲಾ ವಿದ್ಯಾರ್ಥಿ ಆಧಾರದ ಮೇಲೆ ಈ ಕೆಳಗಿನಂತೆ ವಾರ್ಷಿಕ ವೆಚ್ಚಗಳನ್ನು ನೀಡಬಹುದಾಗಿದೆ ಎಂದು ಡೀನ್ (ಅಧ್ಯಯನ ಕೇಂದ್ರಗಳು) ಅವರು ತಿಳಿಸಿರುತ್ತಾರೆ.

ಬಿಎ/ ಬಿಕಾಂ/ ಬಿಬಿಎ ರೂ.700/-
ಎಂಎ/ ಎಂಕಾಂ ರೂ.1,000/-
ಎಂಎಸ್ಸಿ ರೂ.3,500/-
ಬಿ.ಎಡ್ ರೂ.4,000/-
ಬಿ.ಎಸ್ಸಿ/ ಬಿಸಿಎ ರೂ.3,000/-
ಬಿ.ಲಿಬ್.ಐ.ಎಸ್ಸಿ./ ಎಂ.ಲಿಬ್.ಐ.ಎಸ್ಸಿ ರೂ.1,500/-
ಎಂಬಿಎ ರೂ 2000/-

ಕುಲಸಚಿವರು.

ಕುಲಪತಿಗಳು

ಇದರೊಂದಿಗೆ ಕಲಿಕಾರ್ಥಿ ಸಹಾಯ ಕೇಂದ್ರಗಳಿಗೆ ಈ ಹಿಂದೆ ನೀಡುತ್ತಿದ್ದಂತಹ ಪ್ರವೇಶಾತಿ ಪ್ರೋತ್ಸಾಹ ಧನದ ಆದೇಶವನ್ನು ಹಿಂಪಡೆಯಲು ತೀರ್ಮಾನಿಸಲಾಯಿತು ಹಾಗು ಇನ್ನು ಮುಂದೆ ನಡೆಸುವ ಕಾರ್ಯಕ್ರಮಗಳಿಗೆ ಮೇಲ್ಕಂಡಂತೆ ವೆಚ್ಚ ಪಾವತಿಸಲು ತೀರ್ಮಾನಿಸಲಾಯಿತು.

ಕಲಿಕಾರ್ಥಿ ಸಹಾಯ ಕೇಂದ್ರಗಳಲ್ಲಿ ಶೈಕ್ಷಣಿಕ ಕಾರ್ಯಕ್ರಮಗಳನ್ನು ನಡೆಸಲು ಪ್ರತಿ ವಿದ್ಯಾರ್ಥಿಯ ಹಣ ನೀಡುವುದರಿಂದ ಲೆಕ್ಕ ಪತ್ರಗಳನ್ನು ಸರಿಯಾಗಿ ಸಲ್ಲಿಸಲು ಹಾಗು ಒಟ್ಟಾರೆಯಾಗಿ ಕಾರ್ಯಕ್ರಮ ಮುಗಿದ ನಂತರ ಹಾಜರಾತಿ ಇವುಗಳನ್ನು ಪರಿಶೀಲಿಸಿ, ಹಣ ನೀಡಬಹುದಾಗಿದೆ ಹಾಗು ಅಧ್ಯಯನ ಕೇಂದ್ರಗಳು ವಿ.ವಿ.ಯಿಂದ ನಿಗದಿತ ಪ್ರಮಾಣದಲ್ಲಿ ಸಂಭಾವನೆಯನ್ನು ಪಡೆಯಲು ಸಾಧ್ಯವಾಗುತ್ತದೆ. ಒಂದು ಪಕ್ಷ ವಿಶ್ವವಿದ್ಯಾನಿಲಯವು ಶುಲ್ಕದಲ್ಲಿ ಏರಿಕೆ ಮಾಡಿದರು, ನೀಡುವ ಸಂಭಾವನೆ ಮೊತ್ತದಲ್ಲಿ ಪ್ರತಿ ವರ್ಷ ವ್ಯತ್ಯಾಸ ಕಾಣುವುದಿಲ್ಲ. ನಿಗದಿತ ಅವಧಿಯ ತನಕ ಈ ಸಂಭಾವನೆ ವ್ಯವಸ್ಥೆಯನ್ನು ಮುಂದುವರಿಸಬಹುದಾಗಿದೆ ಎಂಬುದನ್ನು ಸಭೆಯು ಅನುಮೋದಿಸಿತು.

ಇದರೊಂದಿಗೆ ಪ್ರಸಕ್ತ ಶೈಕ್ಷಣಿಕ ಸಾಲಿನಿಂದಲೇ ಎಲ್ಲಾ ಸ್ನಾತಕೋತ್ತರ ವಿಜ್ಞಾನ ವಿಷಯಗಳ ಪ್ರಾಯೋಗಿಕ ತರಗತಿಗಳನ್ನು, ಪ್ರಾಯೋಗಿಕ ಪರೀಕ್ಷೆಗಳನ್ನು ಹಾಗು ಎಂ.ಬಿ.ಎ ಸೆಮಿನಾರ್‌ಗಳನ್ನು ವಿವಿಧ ಕೇಂದ್ರಗಳಲ್ಲಿ ನಡೆಸಲು ತೀರ್ಮಾನಿಸಲಾಯಿತು. ಪ್ರಸ್ತುತ, ಕರಾಮುವಿಯ ರಾಜ್ಯದಾದ್ಯಂತ ದೂರ ಶಿಕ್ಷಣ ನೀಡಲು ಏಕೈಕ ಸಂಸ್ಥೆಯಾಗಿರುವುದರಿಂದ ವಿವಿಧ ಕೇಂದ್ರಗಳಲ್ಲಿ ಪ್ರಾಯೋಗಿಕ ತರಗತಿಗಳನ್ನು, ಪ್ರಾಯೋಗಿಕ ಪರೀಕ್ಷೆಗಳನ್ನು ಹಾಗು ಎಂ.ಬಿ.ಎ ಸೆಮಿನಾರ್‌ಗಳನ್ನು ನಡೆಸುವುದರಿಂದ ಮುಂದಿನ ಸಾಲುಗಳಲ್ಲಿ ಹೆಚ್ಚಿನ ವಿದ್ಯಾರ್ಥಿಗಳು ಪ್ರವೇಶಾತಿ ಪಡೆಯುತ್ತಾರೆ. ಈ ಹಿನ್ನೆಲೆಯಲ್ಲಿ, ಈ ಕೆಳಕಂಡ ಕೇಂದ್ರಗಳಲ್ಲಿ ವಿದ್ಯಾರ್ಥಿಗಳ ಪ್ರವೇಶಾತಿ ಮೇರೆಗೆ ಪ್ರಾಯೋಗಿಕ ತರಗತಿಗಳನ್ನು, ಪ್ರಾಯೋಗಿಕ ಪರೀಕ್ಷೆಗಳನ್ನು ಹಾಗು ಎಂ.ಬಿ.ಎ ಸೆಮಿನಾರ್‌ಗಳನ್ನು ನಡೆಸಲು ತೀರ್ಮಾನಿಸಲಾಯಿತು.

1. ಮೈಸೂರು
2. ಬೆಂಗಳೂರು
3. ಉಡುಪಿ/ ಮಂಗಳೂರು
4. ಧಾರವಾಡ/ ಬೆಳಗಾವಿ
5. ಕಲುಬುರ್ಗಿ
6. ಶಿವಮೊಗ್ಗ/ ದಾವಣಗೆರೆ

ಸದರಿ ಕೇಂದ್ರಗಳಲ್ಲಿ ಸಾಧ್ಯವಾದಷ್ಟು ಮಟ್ಟಿಗೆ ಸಂಬಂಧಪಟ್ಟ ಸ್ಥಳೀಯ ವಿಶ್ವವಿದ್ಯಾನಿಲಯ ಅಥವಾ ಸರ್ಕಾರಿ ಕಾಲೇಜುಗಳಲ್ಲಿ ನಡೆಸಲು ಉದ್ದೇಶಿಸಿತು.

## ವಿಷಯ ಸಂಖ್ಯೆ: 58.13

ವಿಷಯ: ವಿಶ್ವವಿದ್ಯಾನಿಲಯದ ಹೊಸ ಶೈಕ್ಷಣಿಕ ಕಾರ್ಯಕ್ರಮಗಳು ಹಾಗು ಸೆಮಿಸ್ಟರ್ ಮೋಡ್‌ನ ವಿವಿಧ ಪದವಿಗಳ ಪರೀಕ್ಷಾ ಶುಲ್ಕ ಹಾಗೂ ಇತರೆ ಶುಲ್ಕಗಳನ್ನು ಪರಿಷ್ಕರಿಸುವ ಬಗೆಗೆ.

* * * * *

ವಿಶ್ವವಿದ್ಯಾನಿಲಯವು ನಡೆಸುವ ವಿವಿದ ಪದವಿ ಪರೀಕ್ಷೆಗಳ ಪರೀಕ್ಷಾ ಶುಲ್ಕಗಳನ್ನು ಈ ಹಿಂದೆ 2021ನೇ ಸಾಲಿನಲ್ಲಿ ಪರಿಷ್ಕರಿಸಿ ಜಾರಿಗೆ ತರಲಾಗಿತ್ತು. ಪ್ರಸ್ತುತ ಸಾಲಿನಿಂದ ಹೊಸ ಶೈಕ್ಷಣಿಕ ಕಾರ್ಯಕ್ರಮಗಳನ್ನು ಆರಂಭಿಸಿದ್ದು ಹಾಗು ಎಂ.ಎ./ ಎಂ.ಕಾಂ/ ಎಂ.ಲಿಬ್.ಐ.ಎಸ್ಸಿ ಕಾರ್ಯಕ್ರಮಗಳನ್ನು ಸೆಮಿಸ್ಟಾರ್ ಮೋಡ್‌ನಲ್ಲಿ ಆರಂಭಿಸಿದ್ದು ಈ ಸಂಬಂಧ ವಿವಿಧ ಪದವಿ ಪರೀಕ್ಷೆಗಳ ಪರೀಕ್ಷಾ ಶುಲ್ಕಗಳನ್ನು ಪರಿಷ್ಕರಿಸುವ ಸಂಬಂಧವಾಗಿ ವಿಷಯವನ್ನು ಶೈಕ್ಷಣಿಕ ಮಂಡಳಿ ಸಭೆಯಲ್ಲಿ ಚರ್ಚೆ ಮತ್ತು ನಿರ್ಣಯಕ್ಕಾಗಿ ಮಂಡಿಸಲಾಗಿದೆ. (ಪ್ರತಿ ಲಗತ್ತಿಸಿದೆ)

ಕುಲಸಚಿವರು ಕುಲಪತಿಗಳು

ತೀರ್ಮಾನ :

**ವಿಶ್ವವಿದ್ಯಾನಿಲಯದ ವಿವಿಧ ಪದವಿಗಳ ಪರೀಕ್ಷಾ ಶುಲ್ಕ ಹಾಗೂ ಇತರೆ ಶುಲ್ಕಗಳನ್ನು ಪರಿಷ್ಕರಿಸಿರುವ ಪ್ರತಿಯನ್ನು ಅನುಮೋದಿಸಲಾಯಿತು.**

## ವಿಷಯ ಸಂಖ್ಯೆ: 58.14

ವಿಷಯ: ಸಂಪೂರ್ಣ ದೃಷ್ಟಿಹೀನ ವಿದ್ಯಾರ್ಥಿಗಳಿಗೆ ಉಚಿತ ಶಿಕ್ಷಣ ನೀಡುವ ಬಗ್ಗೆ.

* * * * *

ಮಾನ್ಯ ಕುಲಪತಿಗಳು ಸಭೆಯಲ್ಲಿ ಸಂಪೂರ್ಣ ದೃಷ್ಟಿಹೀನ ವಿದ್ಯಾರ್ಥಿಗಳಿಗೆ ಉಚಿತ ಶಿಕ್ಷಣ ನೀಡುವ ಬಗ್ಗೆ ಪ್ರಸ್ತಾಪಿಸಿದರು.

ತೀರ್ಮಾನ :

**ದೃಷ್ಟಿಹೀನ ವಿದ್ಯಾರ್ಥಿಗಳಿಗೆ 2021–22ನೇ ಜನವರಿ ಸಾಲಿನಿಂದ ಉಚಿತ ಶಿಕ್ಷಣ ನೀಡುವ ಬಗ್ಗೆ ಸಭೆಯು ಸರ್ವಾನುಮತದಿಂದ ಅನುಮೋದಿಸಲಾಯಿತು.**

## ವಿಷಯ ಸಂಖ್ಯೆ: 58.15

ವಿಷಯ: ಕರಾಮುವಿಯ ಬೋಧಕೇತರ ಸಿಬ್ಬಂದಿಗಳಿಗೆ ಕಾಲಕಾಲಕ್ಕೆ ತರಬೇತಿ ನೀಡುವ ಬಗ್ಗೆ.

* * * * *

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದಲ್ಲಿ ಕಾರ್ಯನಿರ್ವಹಿಸುತ್ತಿರುವ ಕೆಲವು ಬೋಧಕೇತರ ಸಿಬ್ಬಂದಿಗಳಿಗೆ ವಿ.ವಿ.ಯ ವತಿಯಿಂದ ಯಾವುದೇ ರೀತಿಯ ಕಡತ ನಿರ್ವಹಣೆ, ಇ–ಆಫೀಸ್, ಯುಜಿಸಿ ಹಾಗು ದೂರ ಶಿಕ್ಷಣ ನಿಯಮಾವಳಿಗಳು, ಕರ್ನಾಟಕ ಸರ್ಕಾರದ ಸಂಬಂಧಪಟ್ಟ ನಿಯಮಗಳು ಮತ್ತು ವಿ.ವಿ.ಯ ಶೈಕ್ಷಣಿಕ ಕಾರ್ಯಕ್ರಮಗಳ ಬಗ್ಗೆ ಮತ್ತು ಇನ್ನಿತರೆ ವಿಷಯಗಳ ಬಗ್ಗೆ ತರಬೇತಿ ನೀಡಿರುವುದಿಲ್ಲ.

ಅಲ್ಲದೇ, ಎಲ್ಲಾ ಬೋಧಕ ಹಾಗು ಬೋಧಕೇತರ ಸಿಬ್ಬಂದಿಗಳಿಗೆ ದೈಹಿಕ ಮತ್ತು ಮಾನಸಿಕ ಸ್ವಾಸ್ಥ್ಯಕ್ಕಾಗಿ ಯೋಗಾಭ್ಯಾಸಕ್ಕೆ ಸಂಬಂಧಿಸಿದಂತೆ ವಿಶ್ವವಿದ್ಯಾನಿಲಯದ ವತಿಯಿಂದ ತರಬೇತಿ ನೀಡುವ ವಿಷಯವನ್ನು ಪ್ರಸ್ತಾಪಿಸಲಾಯಿತು.

ಕುಲಸಚಿವರು | ಕುಲಪತಿಗಳು

ಚರ್ಚೆ :

ಸದರಿ ವಿಷಯದ ಬಗ್ಗೆ ಡಾ. ಎನ್. ಲಕ್ಷ್ಮಿ, ಅಧ್ಯಕ್ಷರು, ಶಿಕ್ಷಣಶಾಸ್ತ್ರ ಅಧ್ಯಯನ ಮತ್ತು ಸಂಶೋಧನಾ ವಿಭಾಗ, ಅವರು ಮಾತನ್ನಾಡಿ ಸದರಿ ವಿಷಯವು NAACನ 6ನೇ ಮಾನದಂಡದಡಿಯಲ್ಲಿ ತಮ್ಮ ಸಮಿತಿಯ ವ್ಯಾಪ್ತಿಗೆ ಬರುವುದರಿಂದ ಇದರ ಉಸ್ತುವಾರಿಯನ್ನು ವಹಿಸಿಕೊಳ್ಳುವುದಾಗಿ ಸಭೆಗೆ ತಿಳಿಸಿದರು.

ತೀರ್ಮಾನ :

ಕರಾಮುವಿಯ ಬೋಧಕೇತರ ಸಿಬ್ಬಂದಿಗಳಿಗೆ ಕಾಲಕಾಲಕ್ಕೆ ತರಬೇತಿ ನೀಡಲು ಹಾಗು ಎಲ್ಲಾ ಬೋಧಕ ಹಾಗು ಬೋಧಕೇತರ ಸಿಬ್ಬಂದಿಗಳಿಗೆ ಯೋಗ ತರಬೇತಿ ನೀಡುವ ಉಸ್ತುವಾರಿಯನ್ನು ಡಾ. ಎನ್. ಲಕ್ಷ್ಮಿ ರವರಿಗೆ ವಹಿಸಲು ತೀರ್ಮಾನಿಸಲಾಯಿತು.

## ವಿಷಯ ಸಂಖ್ಯೆ: 58.16

ವಿಷಯ : National Education Foundation (NEF) and Rangnekar Institute of Management Studies ಇವರ ಸಹಕಾರದೊಂದಿಗೆ ಕರಾಮುವಿಯಲ್ಲಿ ಕೌಶಲ್ಯಾಭಿವೃದ್ಧಿ ಕಾರ್ಯಕ್ರಮವನ್ನು ಪ್ರಾರಂಭಿಸುವ ಬಗ್ಗೆ.

* * * * *

Rangnekar Institute of Management Studies ಇವರು ದಿನಾಂಕ: 23–08–2021 ರಂದು ಪ್ರಸ್ತಾವನೆ ಸಲ್ಲಿಸಿದ್ದು, ಅದರಲ್ಲಿ State University of New York ಇವರ ಸಹಯೋಗದಲ್ಲಿ ಕೌಶಲ್ಯಾಭಿವೃದ್ಧಿ ಕಾರ್ಯಕ್ರಮಗಳನ್ನು ನಡೆಸುತ್ತಿದ್ದು, ಈ ಕೆಳಕಂಡ ಕಾರ್ಯಕ್ರಮಗಳನ್ನು ಕರಾಮುವಿಯಲ್ಲಿ ಆರಂಭಿಸಲು ಸಹಕಾರ ಕೋರಿರುತ್ತಾರೆ.

1. Artificial Intelligence
2. Big Data Management
3. Business Analysis
4. Machine Learning
5. Data Science
6. Project Management
7. Supply Chain Management
8. Six Sigma
9. Product and Operations Mangement
10. Cyber Security
11. Internet of Things

ಈ ಸಂಬಂಧ ಮಾನ್ಯ ಕುಲಪತಿಗಳು ದಿನಾಂಕ: 28–09–2021 ರಂದು ಅನುಮೋದನೆ ನೀಡಿದ್ದು, ಅದರಂತೆ ದಿನಾಂಕ: 29–09–2021 ರಂದು Exclusive Learner Support Centre (ELSC) Monitoring Committee ಸಭೆ ನಡೆಸಿ ಸಭಾ ನಡಾವಳಿ ಸಿದ್ಧಪಡಿಸಿದೆ (ಪ್ರತಿ ಲಗತ್ತಿಸಿದೆ). ಈ ಸಂಬಂಧ Rangnekar Institute of Management Studies ಇವರೊಂದಿಗೆ ಒಪ್ಪಂದ ಮಾಡಿಕೊಳ್ಳಲಾಗಿದೆ (ಪ್ರತಿ ಲಗತ್ತಿಸಿದೆ). ಸದರಿ ಕಾರ್ಯಕ್ರಮಗಳನ್ನು ಕರಾಮುವಿಯಲ್ಲಿ ಆರಂಭಿಸಲು ಅನುಮೋದನೆ ಕೋರಿದೆ.

<u>ತೀರ್ಮಾನ</u> :

**National Education Foundation (NEF) and Rangnekar Institute of Management Studies ಇವರು ನೀಡಿರುವ ಪ್ರಸ್ತಾವನೆಯನ್ನು ಪರಿಶೀಲಿಸಲಾಯಿತು. ರಂದು Exclusive Learner Support Centre (ELSC) Monitoring Committee ವರದಿಯನ್ನು ಸಭೆಯಲ್ಲಿ ಒಪ್ಪಲಾಯಿತು. ಕರಾಮುವಿಯಲ್ಲಿ National Education Foundation (NEF) and Rangnekar Institute of Management Studies ಇವರ ಸಹಕಾರದೊಂದಿಗೆ State University of New York ಅನುಮೋದಿತ ಈ ಮೇಲ್ಕಂಡ ಹನ್ನೊಂದು ಕೌಶಲ್ಯಾಭಿವೃದ್ಧಿ ಕಾರ್ಯಕ್ರಮಗಳನ್ನು ಕರಾಮುವಿಯಲ್ಲಿ ಪ್ರಾರಂಭಿಸಲು ಅನುಮೋದಿಸಲಾಯಿತು.**

ಅಂತಿಮವಾಗಿ 58ನೇ ಶೈಕ್ಷಣಿಕ ಮಂಡಳಿ ಸಾಮಾನ್ಯ ಸಭೆಗೆ ಆಗಮಿಸಿ, ಮಂಡಿತ ವಿಷಯಗಳ ಬಗ್ಗೆ ಚರ್ಚಿಸಿ, ತಮ್ಮ ಅಮೂಲ್ಯ ಸಲಹೆ, ಸೂಚನೆಗಳನ್ನು ನೀಡಿ, ಸಭೆಯನ್ನು ಸುಸೂತ್ರವಾಗಿ ನಡೆಸಿಕೊಟ್ಟಿದ್ದಕ್ಕೆ ಎಲ್ಲಾ ಸದಸ್ಯರುಗಳಿಗೂ ಮಾನ್ಯ ಕುಲಪತಿಗಳು ಧನ್ಯವಾದಗಳನ್ನು ತಿಳಿಸುವುದರೊಂದಿಗೆ ಸಭೆಯು ಮುಕ್ತಾಯಗೊಂಡಿತು.

ಕುಲಸಚಿವರು ಹಾಗು
ಸದಸ್ಯ ಕಾರ್ಯದರ್ಶಿಗಳು

ಕುಲಪತಿಗಳು ಹಾಗು ಅಧ್ಯಕ್ಷರು